ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ, ದೇವದುರ್ಗ.

**ಸಿ ಸಿ ನಂ.700/2023**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ,
ಜಾಲಹಳ್ಳಿ.

– ವಿರುದ್ಧ –

ಆರೋಪಿಃ ಶಿವನಗೌಡ ತಂದೆ ಸಂಕಪ್ಪ ದೇಸಾಯಿ.
ವಯಸ್ಸುಃ 45 ವರ್ಷಗಳು. ಉಃ ಚಾಲಕ,
ವಾಸಃ ಕಕ್ಕಲದೊಡ್ಡಿ, ತಾಃ ಸಿರವಾರ,

**ದೋಷಾರೋಪಣೆ**

ನಾನು ಸುರೇಶ ಅಣ್ಣಪ್ಪ ಸವದಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 19.05.2023 ರಂದು ಬೆಳಗಿನ ಜಾವಾ 01.00 ಗಂಟೆ ಸಮಯದಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಜಾಲಹಳ್ಳಿ ಪೊಲೀಸ ಠಾಣೆ ಹದ್ದಿ ಪೈಕಿ ದೇವದುರ್ಗ ತಾಲ್ಲೂಕು, ತಿಂಥಣಿಬ್ರೀಜ್-ಜಾಲಹಳ್ಳಿ ಮುಖ್ಯ ರಸ್ತೆಯ ಮೇಲೆ ಆರೋಪಿತನು ತನ್ನ ಕಾರ್ ನಂ.ಕೆ.ಎ-36 ಎನ್-8029 ನೇದ್ದರಲ್ಲಿ ಸಾಕ್ಷಿ-1 ಮತ್ತು 6 ಹಾಗೂ ಮೃತ ರಂಗಪ್ಪ ಇವರನ್ನು ಕೂಡಿಸಿಕೊಂಡು ಅತಿವೇಗ ಮತ್ತು ಅಲಕ್ಷತನದಿಂದ ನಡೆಯಿಸಿ ಚಿಂಚೋಡಿಯ ಹೆಬ್ಬಾಳ ನಾಗಪ್ಪ ಇವರ ಹೊಲದ ಹತ್ತಿರ ಹೋಗುತ್ತಿದ್ದಾಗ ರಸ್ತೆಗೆ ಒಂದು ನಾಯಿ ಅಡ್ಡ ಬಂದಿದ್ದು ಅದನ್ನು ತಪ್ಪಿಸಲು ಒಮ್ಮೆಲೆ ಬ್ರೇಕ್ ಹಾಕಿದ್ದರಿಂದ ಕಾರನ್ನು ನಿಯಂತ್ರಣ ಮಾಡದೆ ರಸ್ತೆಯ ಪಕ್ಕದ ಬಾಂಡ್ ಕಲ್ಲಿಗೆ ಗುದ್ದಿದ್ದಾಗ ಕಾರ್ ಪಲ್ಟಿಯಾಗಿದ್ದರಿಂದ ರಂಗಪ್ಪನ ತಲೆಗೆ, ಎಡಕಿವಿಗೆ ಭಾರಿ ಸ್ವರೂಪದ ಗಾಯಗಳಾಗಿದ್ದು, ಸಾಕ್ಷಿ-6 ರವರಿಗೆ ಸಾದಾ ಸ್ವರೂಪದ ಗಾಯವಾಗಿದ್ದು, ಗಾಯಾಳು ರಂಗಪ್ಪನು ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿರುತ್ತಾರೆ ಎಂದು ಆ ಮೂಲಕ ಭಾರತ ದಂಡ ಸಂಹಿತೆ ಕಲಂ 279, 337 ಮತ್ತು 304(ಎ) ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರಿ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ದೋಷಾರೋಪಣೆಯನ್ನು ಈ ದಿನ ದಿನಾಂಕಃ 09.01.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಉತ್ತರವನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ, ದೇವದುರ್ಗ.

**ಸಿ ಸಿ ನಂ.700/2023**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ,
ಜಾಲಹಳ್ಳಿ.

– ವಿರುದ್ಧ –

ಆರೋಪಿಃ ಶಿವನಗೌಡ ತಂದೆ ಸಂಕಪ್ಪ ದೇಸಾಯಿ,
ವಯಸ್ಸುಃ 45 ವರ್ಷಗಳು, ಉಃ ಚಾಲಕ,
ವಾಸಃ ಕಕ್ಕಲದೊಡ್ಡಿ, ತಾಃ ಸಿರವಾರ,

**:: ಆಪಾದನೆ ::**

1. ನಿಮಗೆ ಓದಿ ಹೇಳಿದ ಆಪಾದನೆ ಅರ್ಥವಾಯಿತಾ?

ಉತ್ತರಃ-

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ?

ಉತ್ತರಃ-

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ತಿಳಿಯುವಂತೆ ಆತನ ಭಾಷೆಯಲ್ಲಿ ಓದಿ, ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢೀಕರಿಸಿರುತ್ತೇನೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ದೇವದುರ್ಗ.

ಆರೋಪಿತರ ಸಹಿ